# ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ.ಸಿ. 1729/2021

**ಪಿಡಬ್ಲೂ-2**

**ಸಿಡಬ್ಲೂ-2**

| | | |
|---|---|---|
| ಸಾಕ್ಷಿದಾರರ ಹೆಸರು | - | ಕೃಷ್ಣ @ ಕೃಷ್ಣನಾಯಕ |
| ತಂದೆಯ ಹೆಸರು | - | ನರಸನಾಯಕ |
| ವಯಸ್ಸು | - | 50 ವರ್ಷ |
| ಕೆಲಸ | - | ವ್ಯವಸಾಯ |
| ವಾಸ | - | ಅರ್ಜುನಹಳ್ಳಿ ಗ್ರಾಮ |

**ದಿನಾಂಕ 05-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಚಾಸಾ 1, 3  ರಿಂದ 8 ಮತ್ತು ಆರೋಪಿ ಗೊತ್ತು. ಆರೋಪಿ ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ. ನಾನು ಘಟನೆಯ ಕುರಿತು ಯಾವುದೇ ಹೇಳಿಕೆಯನ್ನು ನೀಡಿಲ್ಲ. ಮುದ್ದೆಮಾಲು ನಾನು ನೋಡಿರುವುದಿಲ್ಲ. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ತೋರಿಸಿದ ದಾಖಲೆಯ ಮೇಲೆ ತಮ್ಮ ಸಹಿ ಇರುವುದನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಪಂಚನಾಮೆ ಅದನ್ನು ನಿಪಿ 2 ಎಂದು ಹಾಗೂ ಸಹಿಯನ್ನು **ನಿಪಿ 2(ಎ)** ಎಂದು ಗುರುತಿಸಲಾಯಿತು.  ನಿಪಿ2 ರಲ್ಲಿ ಏನು ಬರೆದಿದೆ ಗೊತ್ತಿಲ. ನಿಪಿ.2 ಕ್ಕೆ ನಾನು ಪೋಲಿಸರ ಮಾತನ್ನು ಕೇಳಿ ಪೋಲಿಸ್ ಠಾಣೆಯಲ್ಲಿ ಸಹಿ ವಾಡಿದ್ದು , ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ನಾನು ತನಿಖಾಧಿಕಾರಿಗೆ ಯಾವುದೇ ಘಟನಾ ಸ್ಥಳವನ್ನು ತೋರಿಸಿಲ್ಲ. ನನ್ನ ಸಮಕ್ಷಮ ಯಾಕಿದೇ ಚಾಕುವನ್ನು

ಅಮಾನತ್ತುಪಡಿಸಿಕೊಂಡಿಲ್ಲ. ನಿಪಿ.2 ಕ್ಕೆ ಬೇರೆ ಯಾರೋ ಸಹಿ ಮಾಡಿರುತ್ತಾರೋ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ಆರೋಪಿ ವೆಂಕಟೇಶನಾಯಕ ಹಾಗೂ ಚಾಸಾ-1 ನಾಗೇಶ ರವರ ನಡುವೆ ತಿರುಗಾಡುವ ಜಾಗದ ವಿಚಾರದಲ್ಲಿ ಮೊದಲಿನಿಂದಲೂ ತಕರಾರು ಇದ್ದು ಸದರಿ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಾಗದ ವಿಚಾರವಾಗಿ ದಿಃ 04-07-2019 ರಂದು ನಾನು ನಮ್ಮ ಮನೆಯ ಬಳಿ ಇರುವಾಗ ಚಾಸಾ-1 ಅವರ ಮನೆಯ ಹತ್ತಿರ ಗಲಾಟೆ ಶಬ್ಧ ಕೇಳಿತು ಎಂದರೆ ಸರಿಯಲ್ಲ. ನಂತರ ನಾನು ಅಲ್ಲಿ ಹೋಗಿ ನೋಡಲಾಗಿ ಆರೋಪಿ ಚಾಸಾ-1 ರವರೊಂದಿಗೆ ಗಲಾಟೆ ಮಾಡಿ ಏನೋ ಬೋಳಿ ಮಗನೇ ಎಂದು ಅವಾಚ್ಯ ಶಬ್ಧಳಗಳಿಂದ ಬೈದನು ಎಂದರೇ ಸರಿಯಲ್ಲ. ನಂತರ ಸರಿಯಾಗಿ ಬುದ್ದಿ ಕಲಿಸುವದಾಗಿ ಹೇಳಿ ಮತ್ತು ಪದೇ ಪದೇ ತಿರುಗಾಡುವ ಜಾಗದ ವಿಚಾರವಾಗಿ ತೊಂದರೆ ಉಂಟುಮಾಡುತ್ತಿಯ ಎಂದು ಆರೋಪಿ ತನ್ನ ಮನೆಯ ಒಳಗಡೆ ಹೋಗಿ ಮನೆಯಲ್ಲಿರುವ ಚಾಕುವನ್ನು ತೆಗೆದುಕೊಂಡು ಬಂದು ಚಾಸಾ-1 ರವರ ಎಡಭಾಗದ ಕೆನ್ನೆಗೆ ಹೊಡೆದು ರಕ್ತ ಗಾಯ ಮಾಡಿದರು ಎಂದರೆ ಸರಿಯಲ್ಲ. ನಂತರ ಚಾಸಾ-1 ರವರಿಗೆ ಜಾಸ್ತಿ ಪೆಟ್ಟಾಗಿ ರಕ್ತ ಬರಲು ಶುರುವಾಯಿತು ಎಂದರೆ ಸರಿಯಲ್ಲ. ನಂತರ ನಾನು ಮತ್ತು ಚಾಸಾ-5 ರಿಂದ 8 ರವರು ಜಗಳವನ್ನು ಬಿಡಿಸಿ ಸಮಾಧಾನ ಮಾಡಿದೇವು ಎಂದರೆ ಸರಿಯಲ್ಲ. ನಂತರ ಆರೋಪಿ ಚಾಕುವನ್ನು ಅಲ್ಲೆ ಎಸೆದು ಹೊರಟು ಹೋದನು ಎಂದರೆ ಸರಿಯಲ್ಲ. ನಂತರ ನಾನು ಚಾಸಾ-5 ಮತ್ತು 7 ರವರು ಒಂದು ಆಟೋದಲ್ಲಿ ಗಾಯಾಳು ಚಾಸಾ-1 ನಾಗೇಶನನ್ನು ಕೆ ,ಆರ್ ನಗರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆ ಕೊಡಿಸಿರುತ್ತೇವೆ ಎಂದರೆ ಸರಿಯಲ್ಲ.

ಚಾಸಾ-1 ರವರು ದೂರು ನೀಡಿದ ನಂತರ ದಿನ ದಿಃ 09-07-2019 ರಂದು ಪೋಲೀಸರು ಘಟನಾ ಸ್ಥಳವಾದ ಅರ್ಜುನಹಳ್ಳಿ ಗ್ರಾಮದ ಚಾಸಾ-1 ರವರು ಮನೆಯ ಮುಂದೆ ಚಾಸಾ-3 ಮತ್ತು 4 ರವರ ಸಮಕ್ಷಮ ಕೇಸಿನ ವಿಚಾರವಾಗಿ ಪಂಚನಾಮೆಯನ್ನು ನಾನು ತೋರಿಸಿಕೊಟ್ಟ ಸ್ಥಳದಲ್ಲಿ ಪರಿಶೀಲನೆಯನ್ನು ಮಾಡಿ ಪಂಚನಾವೆಯನ್ನು ಬರೆದು, ಸದರಿ ಸಮಯದಲ್ಲಿ ಆರೋಪಿ ಕೃತ್ಯಕ್ಕೆ ಬಳಸಿದ ಪ್ಲಾಸ್ಟಿಕ್ ಹಿಡಿಯ ಚಾಕುವನ್ನು ನಾನು ಹಾಜರು ಪಡಿಸಿದ್ದು ಅದನ್ನು ನನ್ನ ಮತ್ತು ಚಾಸಾ 3 ಮತ್ತು 4 ರವರ ಸಮಕ್ಷಮ ಅಮಾನತು ಪಡಿಸಿಕೊಂಡು ಪಂಚನಾಮೆಯನ್ನು ಮಧ್ಯಾಹ್ನ 3.00 ಗಂಟೆಯಿಂದ 3.45 ಗಂಟೆಯವರೆಗೆ ಸ್ಥಳದಲ್ಲಿ ಬರೆದು ಸ್ಥಳದಲ್ಲಿ ಹಾಜರಿದ್ದ ನನ್ನ ಚಾಸಾ 3 ಮತ್ತು 4 ರವರ ಸಹಿಗಳನ್ನು ಅದೇ ಸ್ಥಳದಲ್ಲಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಿನ ದಿಃ 09-07-2019 ರಂದು ತನಿಖಾಧಿಕಾರಿ ಸಮಕ್ಷಮ **ನಿಪಿ 3** ರಲ್ಲಿ ತಿಳಿಸಿರುವ ರೀತಿ ನನ್ನ ಹೇಳಿಕೆಯನ್ನು ಸಹ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿ ನಮ್ಮ ಗ್ರಾಮದವರಾದ ಕಾರಣ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ್ ಎಸ್ )**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ